Karnataka State Audit and Accounts Department,
3rd floor 'A' Block , T T M C Building,
K.H. Road, Shanthinagar,
Bengaluru-560 027.
Phone No:- 080- 22214817
Fax No.:- 080- 22216500
**Email: ksaadtraining@gmail.com**
**Website: www.ksaad.karnataka.gov.in**

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, 3ನೇ
ಮಹಡಿ, 'ಎ' ಬ್ಲಾಕ್, ಟಿಟಿಎಂಸಿ ಕಟ್ಟಡ,
ಕೆ ಹೆಚ್ ರೋಡ್, ಶಾಂತಿನಗರ,
ಬೆಂಗಳೂರು-560 027.
ದೂರವಾಣಿ ಸಂಖ್ಯೆ:- 080- 22214817
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್: : **ksaadtraining@gmail.com**
**Website: www.ksaad.karnataka.gov.in**

**ಸಂಖ್ಯೆ: ಕರಾಲೆ&ಲೆಪ/ತರಬೇತಿ/ಇತರೆ-03/2022-23** /1694 **ದಿನಾಂಕ: 17-02-2023**

**::ಸುತ್ತೋಲೆ::**

**ವಿಷಯ:** ನಿಗದಿ ಪಡಿಸಿರುವ ತರಬೇತಿಗಳನ್ನು ಪಡೆಯದೆ ಇರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿವರವನ್ನು ಕೇಂದ್ರ ಕಛೇರಿಗೆ ಸಲ್ಲಿಸುವ ಕುರಿತು.

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪರೀಕ್ಷಾವಧಿ ಘೋಷಣೆ ಮತ್ತು ಮುಂಬಡ್ತಿ ನೀಡಲು ನಿಗಧಿಪಡಿಸಿರುವ ತರಬೇತಿ ಹಾಗೂ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ. ತರಬೇತಿಯ ಪ್ರಮಾಣ ಪತ್ರಗಳು ಹಾಗೂ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳ ಆಧಾರದ ಮೇಲೆ ಪರೀಕ್ಷಾವಧಿ ಘೋಷಣೆ ಮತ್ತು ಮುಂಬಡ್ತಿಗಳನ್ನು ನೀಡಲಾಗುತ್ತಿದೆ ಹಾಗೂ ಅಧಿಕಾರಿ/ಸಿಬ್ಬಂದಿಗಳಿಗೆ ಆಯಾ ವೃಂದಕ್ಕೆ ನಿಗಧಿಪಡಿಸಲಾದ ಮಾಡ್ಯೂಲ್‌ಗಳು ಹಾಗೂ ಇ-ಗೌರ್ವನೆನ್ಸ್, ಪಂಚತಂತ್ರ ಎಂ.ಎಸ್.ಆಫೀಸ್ ತರಬೇತಿಗಳನ್ನು ಕಡ್ಡಾಯಗೊಳಿಸಲಾಗಿರುತ್ತದೆ.

ಆದ್ದರಿಂದ ಈ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಆಯಾ ಹುದ್ದೆಗೆ ನಿಗದಿ-ಪಡಿಸಲಾದ ತರಬೇತಿಗಳನ್ನು ಪಡೆದು ತರಬೇತಿ ಪ್ರಮಾಣ ಪತ್ರಗಳು ಹಾಗೂ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳ ಸಾಫ್ಟ್ ಪ್ರತಿಯನ್ನು ಈ ಕಛೇರಿಯ ಇ-ಮೇಲ್ ಮುಖಾಂತರ ksaadtrainingcertificates@gmail.comಗೆ ಹಾಗೂ Hard copy ಯನ್ನು ಪ್ರಧಾನ ಕಚೇರಿಗೆ ಕಳುಹಿಸಲು ಸೂಚಿಸಿದೆ. ಈಗಾಗಲೇ ಇಲಾಖಾ ಪರೀಕ್ಷೆಯ ಪ್ರಮಾಣ ಪತ್ರಗಳು ಹಾಗೂ ತರಬೇತಿ ಪ್ರಮಾಣ ಪತ್ರಗಳ ಸಾಫ್ಟ್ ಪ್ರತಿಯನ್ನು ಹಾಗೂ Hard copy ಯನ್ನು ಸಲ್ಲಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳು ಈ ಸುತ್ತೋಲೆಯನ್ನು ಉಪೇಕ್ಷಿಸಲು ಸೂಚಿಸಿದೆ.

ತರಬೇತಿ ಪಡೆಯದೆ ಇರುವ ಅಧಿಕಾರಿ ಹಾಗೂ ಸಿಬ್ಬಂದಿಗಳು ತಾವು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ, ಇ-ಮೇಲ್ ಐಡಿಯ ಸಂಪೂರ್ಣ ವಿವರಗಳೊಂದಿಗೆ ಕೇಂದ್ರ ಕಛೇರಿಗೆ ದಿನಾಂಕ:24-02-2023 ರೊಳಗಾಗಿ ಬಾಕಿಯಿರುವ ತರಬೇತಿಯ ಬಗ್ಗೆ ವಿವರಗಳನ್ನು ನೀಡಲು ಸೂಚಿಸಿದೆ. ನಿಗದಿ ಪಡಿಸಿದ ದಿನಾಂಕದೊಳಗೆ ಮಾಹಿತಿಯನ್ನು ನೀಡದ್ದಿದಲ್ಲಿ ಇನ್ನು ಮುಂದೆ ಆಯೋಜಿಸುವ ತರಬೇತಿಗಳಿಗೆ ತಮ್ಮನ್ನು ನಿಯೋಜಿಸಲು ಸಾಧ್ಯವಾಗುವುದಿಲ್ಲ. ಅಂತಹ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಪರೀಕ್ಷಾವಧಿ ಘೋಷಣೆ ಮತ್ತು ಮುಂಬಡ್ತಿಗಳನ್ನು ತಡೆಹಿಡಿಯಲಾಗುವುದು. ಇದಕ್ಕೆ ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳೇ ನೇರವಾಗಿ ಹೊಣೆಗಾರರಾಗಿರುತ್ತಾರೆ.

ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

ಪ್ರತಿಯನ್ನು:-

1. ಅಪರ ನಿರ್ದೇಶಕರು, ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು, ಬೆಳಗಾವಿ, ಮೈಸೂರು, ಕಲಬುರಗಿ. ಕಛೇರಿಗಳಿಗೆ ಮಾಹಿತಿಗಾಗಿ.
2. ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ.
3. ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.